ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.
ಸಿ.ಸಿ.ಸಂಖ್ಯೆ.4186/2024

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರುಃ- ತಾರಾ ಪ್ರಶಾಂತ್ ಮತ್ತು ಇನ್ನೊಬ್ಬರು

ದೋಷಾರೋಪಣೆ

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ತಾರಾಪ್ರಶಾಂತ್ ಆರ್.ಎ. ಬಿನ್ ರುದ್ರಚಾರ್, ಸುಮಾರು 64 ವರ್ಷ, ನಿವೃತ್ತ ಅರಣ್ಯಾಧಿಕಾರಿ, ಸ್ವಂತ ವಿಳಾಸ ಃ 2 ನೇ ಕ್ರಾಸ್, ವಿದ್ಯಾನಗರ, ಶಿವಮೊಗ್ಗ, ಹಾಲಿ ವಾಸ ಃ ಆಚಾರ್ ಬೀದಿ, ಬೀರೂರು ಟೌನ್, ಕಡೂರು ತಾಲ್ಲೂಕು.

2. ಪಿ.ಕೃಷ್ಣನಾಯ್ಕ ಬಿನ್ ಲೇಟ್ ಎಂ.ಪಾಪನಾಯ್ಕ, ಸುಮಾರು 56 ವರ್ಷ, ವ್ಯವಸಾಯ, ವಾಸ ಃ ಮುಸ್ಲಾಪುರ, ಎಮ್ಮೆದೊಡ್ಡಿ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ಕಡೂರು ಪೋಲೀಸ್ ಠಾಣಾ ವ್ಯಾಪ್ತಿಯ ಕಡೂರು ತಾಲ್ಲೂಕು ಬೀರೂರು ಹೋಬಳಿ, ಎಮ್ಮೆದೊಡ್ಡಿ ಗ್ರಾಮದ ಸರ್ವೇ ನಂಬರ್ 70 ರಲ್ಲಿರುವ ಬಗರ್ ಹುಕುಂ ಜಮೀನಿಗೆ ಸಂಬಂಧಿಸಿದಂತೆ ಆರೋಪಿತರಾದ ನಿಮಗೂ ಹಾಗೂ ಚಾಸಾ-1 ಜಯಲಕ್ಷ್ಮಿರವರಿಗೂ ವಾಜ್ಯವಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕಃ 07.07.2024 ರಂದು ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 2 ರವರು ಸದರಿ ಜಮೀನಿಗೆ ಹೋದಾಗ, 1 ಮತ್ತು 2 ನೇ ಆರೋಪಿತರಾದ ನೀವು ಸದರಿ ಜಮೀನಿನಲ್ಲಿ ಕಲ್ಲುಕಂಬಗಳನ್ನು ನೆಡಲು ಗುಂಡಿಗಳನ್ನು ತೆಗೆಸುತ್ತಿದ್ದು, ಚಾಸಾ-1 ರವರು ನಮ್ಮ ಜಮೀನಿನಲ್ಲಿ ಏಕೆ ಗುಂಡಿ ತೆಗೆಸುತ್ತಿದ್ದೀರಾ ಎಂದು ಕೇಳಿದ್ದಕ್ಕೆ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು, ಜಗಳ ಬಿಡಿಸಲು ಬಂದ ಚಾಸಾ-1 ರವರಿಗೂ ಸಹ ಕೈಗಳಿಂದ ಮೈಕೈಗೆ ಹೊಡೆದು, ಎಳೆದಾಡಿ ಸ್ವ ಇಚ್ಛೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು, ಜಗಳ ಬಿಡಿಸಲು ಬಂದ ಚಾಸಾ-1 ವಿಜಯಲಕ್ಷ್ಮಿ ರವರಿಗೂ ಸಹ ಕೈಗಳಿಂದ ಮೈಕೈಗೆ ಹೊಡೆದು, ಎಳೆದಾಡಿ ಅಪರಾಧಿಕ ಬಲಪ್ರಯೋಗ ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 74 ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ಮತ್ತು 2 ರವರೊಂದಿಗೆ ಜಗಳ ತೆಗೆದು, ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಿ. ಆದಕಾರಣ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 351 (2) ಮತ್ತು (3) ಸಹಕಲಂ 3(5) ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಸದರಿ ಅಪರಾಧವನ್ನು ಮಾಡಿರುವುದರಿಂದ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ಎದುರಿಸಬೇಕೆಂದು ನಾನು ನಿರ್ದೇಶಿಸುತ್ತಿದ್ದೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

1 ಮತ್ತು 2 ನೇ ಆರೋಪಿತರ ಉತ್ತರ: ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

1 ಮತ್ತು 2 ನೇ ಆರೋಪಿತರ ಉತ್ತರ:ಯಾವುದೇ ತಪ್ಪು ಮಾಡಿರುವುದಿಲ್ಲ.

ವಿಚಾರಣೆಯಾಗಬೇಕು.

ದಿನಾಂಕ: **27** ನೇ ದಿವಸ ಮೇ ಮಾಹೆ **2025** ನೇ ಇಸವಿ.

-ಸಹಿ-

**(ಸವಿತರಾಣಿ ಹೆಚ್.ವಿ.,)**

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ.ಗಳು, ಕಡೂರು.